DS – 1186

# III Semester B.A. Examination, November/December 2009

(ಸೆಮಿಸ್ಟರ್) (ಫ್ರೆಷರ್ಸ್ ಸ್ಕೀಂ)

ಕನ್ನಡ ಭಾಷೆ (ಪತ್ರಿಕೆ – III)

ಸಾಹಿತ್ಯ ಸಂವಾದ – ೨

Time : 3 Hours

Max. Marks : 90

## ಭಾಗ - ೧

I. ಅರ್ಥ ಮತ್ತು ಧ್ವನಿ ಬದಲಾಗದಂತೆ **ಮೂರು** ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ. **(3×2=6)**

೧) ಆ ಮಾತುಗಳು ಮುಂದುವರಿಯುವ ಮೊದಲೇ ಇವನು ಅನವಶ್ಯಕವಾಗಿ ಕೆರಳಿ ಒದರಾಡಿದ.

೨) ಅಜ್ಜಿ ಸತ್ತದ್ದಕ್ಕೆ ಆದ ದುಃಖಕ್ಕಿಂತ ಅಜ್ಜಿ ಹೆಣ ಎದುರಿಸಬೇಕಾದ ಭಯ ತೀವ್ರವಾಯಿತು.

೩) ಆ ವಸಂತದೊಳಗೊಮ್ಮೆ ಮಾದ್ರೀದೇವಿ ವನದೊಳಗಾಡುತಿರ್ದಳು.

೪) ನಮ್ಮನ್ನು ಈ ಭೂಮಿಕೆಯಿಂದ ಮೇಲೇರಲು ವಿಜ್ಞಾನವು ಒತ್ತಾಯ ಮಾಡುತ್ತಿದೆ.

II. ಅರ್ಥವತ್ತಾದ ಕ್ರಮದಲ್ಲಿ **ಮೂರು** ವಾಕ್ಯಗಳನ್ನು ಪುನಾರಚಿಸಿ. **(3×2=6)**

೧) ಸಾವ್ಕಾರು ಮೇಣಿಹಾಲು ಬದುಕಿಗೇ ಕುಡಿದೋರು

೨) ಎಲ್ಲ ಅಂದರೆ ಹೈಕಳು ಒಂದೆ ಊರಿನವು

೩) ತೊಟ್ಟಿಲಲ್ಲಿ ಕೊನೆಯ ಅಂಥ ನಿಂತಿದ್ದಾನೆ ವಿಕಾಸದ ಮನುಷ್ಯ

೪) ಮಧ್ಯಾಹ್ನ ಇರಬೇಡ ಊರಲ್ಲಿ ತನಕ ಮಧ್ಯಸ್ಥರಿಲ್ಲದ

III. ಉಪಮೆ ರೂಪಕಗಳನ್ನು ಬಳಸಿ **ಮೂರು** ಸ್ವಂತ ವಾಕ್ಯಗಳನ್ನು ರಚಿಸಿ. **(3×2=6)**

೧) ಆಕಾಶಗಂಗೆ

೨) ಬೆಚ್ಚಡೆ ಬೆಸುಗೆಯರಿಯದಂತಿರಬೇಕು

೩) ಗೇಯ್ಮೆ ಗೆರೆ

೪) ಕಮಲಮುಖಿ

IV. **ಮೂರು** ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. **(3×2=6)**

೧) ಗತಿ ಕಾಣಿಸು

೨) ಮೇಣಿಹಾಲು

೩) ಹುಟ್ಟಿದ್ದಿನ ಕಾಣಿಸು

೪) ಬಣ್ಣದ ಬೀಸಣಿಗೆ

P.T.O.

V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. (2×3=6)

೧) ಕುಂತು ಉಣ್ಣೋರಿಗೆ ಕುಡಿಕೆ ಹೊನ್ನು ಸಾಲದು

೨) ಕೇಡುಗಾಲಕ್ಕೆ ಕೋಡಗನ ಬುದ್ಧಿ

೩) ಕುರುಡ ಸೌದೆ ಹೊಡೆದರೆ ಕೊಡಲಿ ಮುಕ್ಕು

೪) ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು.

## ಭಾಗ - ೨

I. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ವಿವರಿಸಿ. (4×5=20)

೧) ನಿಜದ ಬದುಕಿಗಿಂತ ಮುಕ್ತಿಸ್ಥಾನವೇ ಸುಖದಾಯಕವಾದದ್ದು ಎಂಬುದನ್ನು ನೀಲಾಂಜನೆಯ ನೃತ್ಯ ಪ್ರಸಂಗವು ಪ್ರತಿಪಾದಿಸುವುದೇ ?

೨) ವಿಜ್ಞಾನದ ಶೋಧಗಳು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿ ಮಾಡಿವೆಯೇ ?

೩) ನಿರಂಕುಶ ಮತಿಗಳಾಗಲು ದಾಸ್ಯಬುದ್ಧಿ ತೊಲಗಬೇಕೇ ?

೪) ಚರ್ಚಿನ ಮುಖ್ಯಸ್ಥರು ಗೆಲಿಲಿಯೋನ ಮೇಲೆ ಸಿಟ್ಟಾದದ್ದು ಸರಿಯೇ ?

೫) ಪಾಂಡುಮಾದ್ರಿ ಪ್ರಸಂಗದಲ್ಲಿ ಪ್ರಕೃತಿಯು ಉತ್ತೇಜಕಶಕ್ತಿ ಮಾತ್ರವಲ್ಲ ವಿನಾಶಕಾರಿ ಶಕ್ತಿಯಾಗಿದೆಯೇ ?

೬) 'ನಿರ್ನೀತಿ' ಪ್ರಬಂಧದಲ್ಲಿ ಲೈಂಗಿಕತೆಯು ಕೇವಲ ಜೈವಿಕ ಪ್ರಶ್ನೆಯಾಗಿದೆಯೇ ?

## ಭಾಗ – ೩

I. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. (2×10=20)

೧) 'ಪಯಣ' ಕಥೆಯು 'ಬದುಕೆಂದರೆ ಸಾವಿನ ಕಡೆಗೆ ನಡೆಯುವುದು' ಎಂಬುದನ್ನು ಧ್ವನಿಸುವುದೇ ? ವಿವರಿಸಿ.

೨) ಆಧುನಿಕ ವಿಜ್ಞಾನದ ಕ್ರೌರ್ಯಕ್ಕೆ ಗಾಂಧಿಯ ಚಿಂತನೆಗಳು ಸವಾಲಾದದ್ದು ಹೇಗೆ ?

೩) ಸಾವು ಖಚಿತ ಎನ್ನುವುದು ಗೊತ್ತಿದ್ದೂ ಕೂಡುವ ಪಾಂಡುಮಾದ್ರಿಯರ ಪ್ರಸಂಗವನ್ನು ದುರಂತ ಕಥೆಯೆಂದು ಕರೆಯಬಹುದೇ ?

## ಭಾಗ – ೪

I. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. (2×10=20)

೧) 'ಅಭಿವೃದ್ಧಿ ಎಂದರೆ ಕೇವಲ ಭೌತಿಕ ಅಭಿವೃದ್ಧಿಯಲ್ಲ' ಎಂಬ ಮಾತನ್ನು ನೀವು ಒಪ್ಪುವಿರಾ ?

೨) ಸಾವನ್ನು ಕುರಿತು ಪಂಪನ ಚಿಂತನೆಗಳು ನೀಲಾಂಜನೆಯ ನೃತ್ಯ ಪ್ರಸಂಗದಲ್ಲಿ ಹೇಗೆ ವ್ಯಕ್ತವಾಗಿವೆ ?

೩) ಜ್ಞಾನದ ರಾಜಕಾರಣದಿಂದಾಗಿ ಸಮಾಜದಲ್ಲಿ ಬೌದ್ಧಿಕ ಅಸಮಾನತೆ ಹೆಚ್ಚಿತು ಎನ್ನಬಹುದೇ ?

# III Semester B.A. Examination, November/December 2009

(ಸೆಮಿಸ್ಟರ್ ಸ್ಕೀಮ್) (ರಿಪೀಟರ್ಸ್)

ಕನ್ನಡ ಭಾಷೆ (ಪತ್ರಿಕೆ – III)

ಹೊಸಗನ್ನಡ ಕವಿತೆ ಮತ್ತು ವಿಚಾರ ಸಾಹಿತ್ಯ

Time : 3 Hours　　　　Max. Marks : 90

I. ಅ) ಒಂದರ ಭಾವವನ್ನು ವಿವರಿಸಿ. **(1×5=5)**

1) ಕುರುಡು ಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈಮರೆತು ನಿಂತಾಗ್ಗೆ ಗೂಗೆ ಹಾಡಿತ್ತು
ಮುದ್ರೆಯೊತ್ತುವ ಕಣ್ಣು ಮೋರೆ ನೋಡಿತ್ತೊಮ್ಮೆ
ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು.

2) ಗಿಡ ಗಿಡವು ಹಾವಾಗಿ ನಾಗಲೋಕವು ಹುಟ್ಟಿ
ಬೇಲಿಗಳ ಮೇಲೆಲ್ಲ ಮಾಣಿಕ್ಯ ಚೆಲ್ಲಿ
ಏಳೆಡೆಯ ನಾಗರವು ನಿಂತು ನಾಂಟೇ ವಾಡಿ
ಮಲಗಿದ್ದ ಪತಿರಾಯ ಬೆಳಗುತಿದ್ದ.

ಆ) ಮೂರಕ್ಕೆ ಸಂದರ್ಭ ಸಹಿತ ವಿವರಿಸಿ. **(3×3=9)**

1) ನಿಮಗೇತಕೀ ಕಲ್ಲು ಮನಸ್ಸು?

2) ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

3) 'ದೂರಕ್ಕೆ ಹಾರ ಬೇಡ, ದೀಪಕ್ಕೆ ತಾಗ ಬೇಡ,
ಹೋಗಿ ಬಾ' ಎಂದು ಆಶೀರ್ವದಿಸಿ,

4) ಈಕೆಯ ಬಳಿಗ್ಯಾರೂ ಬರೋದಿಲ್ಲ, ನಗೋದಿಲ್ಲ,

5) ನಿಟ್ಟುಸಿರಿನ ನಡುವೆಯೂ 'ಆತ ತನ್ನ ದೈವ'

6) ಸಾಮಾನ್ಯ ವಿಸ್ತರಣ ದಾಟದಲಿ ಅತಿ ಬಳಸಿ
ಬಿಸುಟಿರುವ ಕಾಯಿಗಳು

ಇ) ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(3×2=6)**

ಕಥನ ಕವನ, ಡಾ|| ದೊಡ್ಡರಂಗೇಗೌಡ, ಡಾ|| ಜಿ.ಎಸ್. ಶಿವರುದ್ರಪ್ಪ,
ಬಲಿ, ಅಮೃತಮತಿ, ಶಬರಿ ಸರ್ಶದ ಊಟ.

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=20)

1) ''ಕತ್ತಲೆ ಬೆಳದಿಂಗಳೊಳಗ'' – ಈ ತತ್ವ ಪದದ ಮಹತ್ವವನ್ನು ವಿವರಿಸಿ.
2) 'ಬಲಿಪಾಡ್ಯಮಿ' – ಈ ಕವಿತೆಯ ವಿಶೇಷತೆಯನ್ನು ಕುರಿತು ವಿಚಾರ ಮಾಡಿ.
3) ಬದುಕಿನ ಸಾಮರಸ್ಯಕ್ಕೆ ಪ್ರೀತಿಯೇ ಆಧಾರ – ಹೇಗೆ, ನಿರೂಪಿಸಿ.
4) ಬಂಧನ ಮತ್ತು ಸ್ವಾತಂತ್ರ್ಯದ ತುಡಿತದಿಂದ ಕೂಡಿದ ಕವನ 'ಅತಿಥಿ' – ವಿವರಿಸಿ.
5) ಗಂಡಿನ ಮೂರು ಮುಖಗಳು.
6) 'ಹೆಜ್ಜೆ ಗುರುತು' – ಕವಿತೆಯಲ್ಲಿ ವ್ಯಕ್ತಗೊಂಡಿರುವ ಕಾವ್ಯ ಧೋರಣೆಯ ನೆಲೆಯು ನಿರೂಪಿತಗೊಂಡಿರುವ ಬಗೆಯನ್ನು ವಿವರಿಸಿ.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. (2×10=20)

1) 'ಪ್ರೀತಿಯೇ ದುರಂತಕ್ಕೆ ಕಾರಣ' – ಈ ಹೇಳಿಕೆಯನ್ನು 'ಕಾರಿ ಹೆಗ್ಗಡೆಯ ಮಗಳು' – ಈ ಕವಿತೆಯ ಆಧಾರದಿಂದ ಸಮರ್ಥಿಸಿ.
2) 'ಬಳೆಗಾರನ ಹಾಡು' – ಈ ಕವಿತೆಯಲ್ಲಿ ಚಿತ್ರಿತಗೊಂಡಿರುವ ಮಧುರ ಬಾಂಧವ್ಯದ ಸ್ವರೂಪವನ್ನು ನಿರೂಪಿಸಿ.
3) ಅನಾಥ ಹೆಣ್ಣು ತಾಯಿಯಾದ ಸಂದರ್ಭವನ್ನು ಕಂಡ ಕವಿಯು ಪ್ರತಿಕ್ರಿಯಿಸಿದ ಬಗೆಯನ್ನು ವಿವರಿಸಿ.
4) ಗಿಡುಗ ಮತ್ತು ಎರೆಹುಳು – ಈ ಕವಿತೆಯ ಆಶಯವನ್ನು ಚರ್ಚಿಸಿ.

IV. ಐದು ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದಲ್ಲಿ ಉತ್ತರಿಸಿ. (5×1=5)

1) ಪ್ರೀತಿಸುವುದರಲ್ಲಿರುವ ಸಮಸ್ಯೆ ಏನು ?
2) 'ಮತಾಂತರ ಯಾಕೆ' – ಈ ಲೇಖನವನ್ನು ಬರೆದವರು ಯಾರು ?
3) ವ್ಯಕ್ತಿಯ ಉನ್ನತಿಗೆ ಬೇಕಿರುವ ಅಂಶಗಳು ಯಾವುವು ?
4) ಮಸನೋಬು ಫುಕವೋಕಾ ಯಾರು ?
5) ಶ್ರೀ ಎಂ.ಎನ್. ಶ್ರೀನಿವಾಸರವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹಳ್ಳಿ ಯಾವುದು ?
6) ಚಾತುರ್ವರ್ಣ ವ್ಯವಸ್ಥೆ ಇರುವ ದೇಶ ಯಾವುದು ?
7) ಆದರ್ಶ ನಾರಿಯರ ಪಟ್ಟಿಯಲ್ಲಿರುವ ಬುದ್ಧಿ ಜೀವಿ ನಾರಿಯರು ಯಾರು ?

V. ಒಂದನ್ನು ಕುರಿತು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ (1×5=5)

1) 'ಎರಡು ಟಿಪ್ಪಣಿಗಳು' – ಈ ಲೇಖನದ ವಿಶೇಷತೆ.
2) ಲಿಂಗ ತಾರತಮ್ಯದ ಸ್ವರೂಪದಲ್ಲಿ – ಸ್ತ್ರೀಯರನ್ನು ಕುರಿತ ಆಲೋಚನೆಗಳು.

VI. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. (2×10=20)

1) 'ಪ್ರೀತಿ ಎನ್ನುವುದೊಂದು ಕಲೆ' – ಹೇಗೆ ! ಲೇಖನದ ಹಿನ್ನೆಲೆಯಲ್ಲಿ ವಿಚಾರಮಾಡಿ.
2) ''ಸ್ವಾತಂತ್ರ್ಯ ಮತ್ತು ಸಮಾನತೆಗೆ ಮತಾಂತರವೊಂದೇ ಮಾರ್ಗ'' – ಈ ಹೇಳಿಕೆಯನ್ನು ಸಮರ್ಥಿಸಿ.
3) ಕಣ್ಮರೆಯಾದ ಗ್ರಾಮಗಳು – ಈ ಟಿಪ್ಪಣಿಯಲ್ಲಿ ನಿರೂಪಿತಗೊಂಡಿರುವ ಪುಸ್ತಕದ ವಿಶೇಷತೆಯನ್ನು ವಿವರಿಸಿ.
4) ದೇಶಿ ಶಿಕ್ಷಣ ಪದ್ಧತಿಯ ನಾಶದ ಪರಿಣಾಮಗಳೇನು ? 'ಮೆಕಾಲೆಯ ಮಕ್ಕಳು' – ಈ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.